† ಶ್ರೀ ಅಜೀಜ್‌ಸೇಟ್.—ಹಿಂದಿನ ವೆಕ್ಕವನ್ನೆಲ್ಲಾ ಕೊಟ್ಟಿದ್ದಾರೆ. 1971ನೇ ಇಸವಿಯದ್ದು ಮಾತ್ರ ವಾರ್ಷಿಕ ವಿವರಗಳನ್ನು ಕೊಟ್ಟಿಲ್ಲ.

ಶ್ರೀ ಟಿ. ವಿ. ಕೃಷ್ಣಪ್ಪ.—ಈ ಸಂಘವನ್ನು ವಿಸರ್ಜನೆ ಮಾಡಿರುವುದರಿಂದ, ಕಾರ್ಮಿಕರ ಹಣ ಮತ್ತು ಅವರ ಆಸ್ತಿಪಾಸ್ತಿಗಳು ಸಂಘದ ಅಧ್ಯಕ್ಷರ ಸ್ವಾಧೀನದಲ್ಲಿರುವುದರಿಂದ, ಅದನ್ನು ಹೊಸದಾಗಿ ಪ್ರಾರಂಭ ಮಾಡಿರುವ ಸಂಘಕ್ಕೆ ಕೊಡಿಸುವ ಏರ್ಪಾಡು ಮಾಡುತ್ತೀರಾ ?

ಶ್ರೀ ಅಜೀಜ್‌ಸೇಟ್.—ಕಾನೂನಿನಲ್ಲಿರುವ ಕಷ್ಟವೇನೆಂದರೆ, ಈ ಸಂಘವನ್ನು ರದ್ದುಮಾಡಿದ ಮೇಲೆ ನಾವು ನೇರವಾಗಿ ಯಾವ ಕ್ರಮವನ್ನೂ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಆದ್ದರಿಂದ ಯೂನಿಯನ್ ಫಂಡ್ ಪಿಸ್ ಅಪ್ರೋಪ್ರಿಯೇಷನ್ ಆಗಿರುವ ಬಗ್ಗೆ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಯಾಗಲೀ ಅಥವಾ ಸಿವಿಲ್ ಕೋರ್ಟಿನಲ್ಲಿಯಾಗಲೀ ಈಗಿನ ಯೂನಿಯನ್‌ನವರು ಹಿಂದಿನ ಯೂನಿಯನ್‌ನ ಅಧ್ಯಕ್ಷರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಟಿ. ವಿ. ಕೃಷ್ಣಪ್ಪ.—ಸರ್ಕಾರದವರೇ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಕಷ್ಟವಾಗಿರುವುದು ಅವರು ಮೇಲ್ಮನೆಯ ಸದಸ್ಯರಾಗಿದ್ದಾರೆಂಬ ಕಾರಣದಿಂದಲೇ ಹೇಗೆ ?

ಶ್ರೀ ಅಜೀಜ್‌ಸೇಟ್.—ಮೇಲ್ಮನೆಯ ಸದಸ್ಯರೇ ಆಗಿರಲೀ, ಮತ್ತೆ ಯಾರೇ ಆಗಿರಲಿ, ಕ್ರಮ ತೆಗೆದುಕೊಳ್ಳುವುದಕ್ಕೆ ಇರುವ ಕಾನೂನಿನ ತೊಂದರೆಗಳು ಏನು ಏಂಬುದನ್ನು ಹೇಳಿದ್ದೇನೆ. ಈ ಯೂನಿಯನ್‌ಗೆ ಸಂಬಂಧಪಟ್ಟ ಪದಾರ್ಥಗಳು, ಮೂವಬಲ್ ಅಂಡ್ ಇಮೂವಬಲ್ ಆಸ್ತಿ ಏನಾದರು ಅದರ ಅಧ್ಯಕ್ಷರ ಹತ್ತಿರ ಇದ್ದರೆ, ಆ ಬಗ್ಗೆ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿಯಾಗಲೀ ಅಥವಾ ಸಿವಿಲ್ ಕೋರ್ಟಿನಲ್ಲಿಯಾಗಲೀ ಕೇಸನ್ನು ಅವರ ವಿರುದ್ಧ ಹಾಕಿ ಪಡೆದುಕೊಳ್ಳಬಹುದು.

ಶ್ರೀ ಬಿ. ವಿ. ಕಕ್ಕಿಲ್ಲಾಯ.—ಈ ಸಂಘದ ನೋಂದಣಿಯನ್ನು ರದ್ದುಗೊಳಿಸಲಾಗಿದೆ ಎಂದು ಹೇಳಿದ್ದೀರಿ. ಆ ರೀತಿ ರದ್ದುಗೊಳಿಸಿದಮೇಲೂ ಸಹ ಆ ಮೇನೇಜ್‌ಮೆಂಟ್ ಈಗ ಅಸ್ತಿತ್ವದಲ್ಲಿದೆಯೇ ಹೇಗೆ ? ಅಸ್ತಿತ್ವದಲ್ಲಿದ್ದರೆ ಆ ಮೇನೇಜ್‌ಮೆಂಟ್‌ನವರ ಹತ್ತಿರ ನಿಮ್ಮ ರಿಜಿಸ್ಟ್ರಾರ್ ಅವರು ವ್ಯವಹಾರ ಮಾಡಿ ಸಂಘದ ಆಸ್ತಿಪಾಸ್ತಿಗಳನ್ನು ವಶಪಡಿಸಿಕೊಳ್ಳಬಹುದಲ್ಲವೇ ?

Sri AZEEZ SAIT.—Unfortunately, that is not the issue. This Union was headed by one Sri Ghulam Dastagir up to 1963, and from then onwards upto 25th September 1972 Sri B. J. Linge Gowda was the President of this Union. During the time of Sri B. J. Linge Gowa there was lot of agitation among the workers, and the workers went to a Court of Law. But some of the workers had to withdraw the cases, and on account of agitation the Returning Officer had to resign. Then a direction was issued to appoint a new Returning Officer. When the new Returning Officer also failed to carry out the instructions, there was no other alternative left except to cancel the registration, and thereby the registration of this Union was cancelled. Now as new Union is there and the workers are now fully in power to take action.

Rates of Wages Paid to Casual Labourers Employed in P.W.D.

615. **Sri K. SIDDAIAH** (Santhemarahally).—

Will the Minister for Public Works and Electricity be pleased to state :—

(*a*) the rate at which the casual labourers engaged on daily wage basis in Public Works Department and Electricity Department are being paid at present ;

(*b*) the year from which these rates have come into force ;

(*c*) the rules that govern payment of wages to these labourers ?

Sri H. M. CHANNABASAPPA (Minister for Public Works and Electricity).—

(*a*) The casual labourers engeged on daily wage basis are being paid at rates as per Schedule sanctioned by concerned Superintending Engineers from year to year, the minimum being 1.40 and maximum Rs. 10.00 including D.A. depending upon the nature and place of work and also the skill and experience of the persons.

(*b*) 1st April, 1972.

(*c*) The Superintending Engineers have been authorised to prescribe schedule of rates for casual labourers.

ಇದರಲ್ಲಿ 1.4 ಬಾಯ್ ಮಜ್ದೂರ್‌ಗೆ, 2.5 ಮೇಲೆ ಮಜ್ದೂರ್‌ಗೆ, 1.5 ವಿಮೆನ್ ಮಜ್ದೂರ್‌ಗೆ ಇದೆ.

ಶ್ರೀ ಕೆ. ಸಿದ್ದಯ್ಯ.—ಸ್ವಾಮಿ ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಲೇಬರರ್ಸ್‌ಗೆ ದಿನಗೂಲಿ ಆಧಾರದ ಮೇಲೆ ಕನಿಷ್ಠ ಕೂಲಿ 1 ರೂಪಾಯಿ 40 ಪೈಸಾ, ಗರಿಷ್ಠ ಕೂಲಿಯು ತುಟ್ಟಿಭತ್ಯವನ್ನೊಳಗೊಂಡಂತೆ 10 ರೂಪಾಯಿಗಳು ಆಗಿರುತ್ತದೆ ಎಂದು ಹೇಳಿದ್ದೀರಿ, ಈ 1 ರೂಪಾಯಿ 40 ಪೈಸಾದಲ್ಲಿ ಮತ್ತು 10 ರೂಪಾಯಿಗಳಲ್ಲಿ ಡಿ. ಎ. ಎಷ್ಟು ಎಂಬುದನ್ನು ಹೇಳುತ್ತೀರಾ ? ಮತ್ತು ಸ್ಕಿಲ್ಡ್ ಲೇಬರಿಗೆ ಎಷ್ಟು ಮತ್ತು ಅನ್‌ಸ್ಕಿಲ್ಡ್ ಲೇಬರಿಗೆ ಎಷ್ಟು ಎಂಬುದನ್ನು ಹೇಳುತ್ತೀರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೆ ಸಂಬಂಧಪಟ್ಟ ದೊಡ್ಡ ಪಟ್ಟಿ ಇದೆ ಅದನ್ನು ಬೇಕಾದರೆ ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಅವರು ಒಂದು ಸಾರಿ ಪೆಡ್ಯೂಲ್ ಆಫ್ ರೇಟ್ ಅನ್ನು ಫಿಕ್ಸ್ ಮಾಡುತ್ತಾರೆ. ದಿನಗೂಲಿಯನ್ನು ಆಯಾ ಸರ್ಕಲ್‌ನಲ್ಲಿ ಸ್ಕಿಲ್ಡ್ ಲೇಬರ್ ಇಷ್ಟು ಅನ್ ಸ್ಕಿಲ್ಡ್ ಲೇಬರಿಗೆ ಇಷ್ಟು ಎಂದು ಫಿಕ್ಸ್ ಮಾಡುತ್ತಾರೆ. ಆ ಪ್ರಕಾರ ಅವರಿಗೆ ಇಷ್ಟಿಷ್ಟು ದಿನಗೂಲಿ ಎಂದು ಕೊಡುತ್ತಾರೆ.

ಶ್ರೀ ಕೆ. ಸಿದ್ದಯ್ಯ.—ಮಿನಿಮಮ್ ಕೂಲಿ 1-40 ರೂಪಾಯಿ ಕೊಡುತ್ತೀವೆ; ಮ್ಯಾಗ್ಜಿಮಮ್ ಕೂಲಿ 10 ರೂಪಾಯಿ ಕೊಡುತ್ತೀವೆ ಎಂದು ಹೇಳಿದ್ದೀರಿ. 1-40 ರೂಪಾಯಿನಲ್ಲಿ ಡಿ.ಎ. ಎಷ್ಟು ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಾಯ್ ಮಜ್ದೂರರಿಗೆ 1-40 ರೂಪಾಯಿ, ಫೀಮೇಲ್ ಮಜ್ದೂರರಿಗೆ 1-50 ರೂಪಾಯಿ, ಮೇಲ್ ಮಜ್ದೂರರಿಗೆ 2-50 ರೂಪಾಯಿ ಕೊಡಲಾಗುತ್ತಿದೆ. ಇದಕ್ಕೆ ಉತ್ತರ ಕೊಡುವುದರಲ್ಲಿ ಸ್ವಲ್ಪ ತಪ್ಪಿರಬಹುದು, ಇಪ್ಪತ್ತಿನ ಜೀವನದ ಅಂತಸ್ತು ಏರಿದೆ ಅದನ್ನು ಪರಿಶೀಲನೆಗೆ ತೆಗೆದುಕೊಂಡು ಇಷ್ಟು ಇರಬೇಕೆಂದು ತೀರ್ಮಾನ ಮಾಡಿ ಡಿ. ಎ. ಇತ್ಯಾದಿ ಎಲ್ಲಾ ಸೇರಿ ಅದನ್ನು ಫಿಕ್ಸ್ ಮಾಡಿದೆ.

ಶ್ರೀ ಕೆ. ಸಿದ್ದಯ್ಯ —(ಇ) ಪ್ರಶ್ನೆಗೆ ಉತ್ತರವಾಗಿ ಈ ನಿಯಾತವಲ್ಲದ ಕಾರ್ಮಿಕರಿಗೆ ಕೂಲಿ ದರಗಳ ಪಟ್ಟಿಯನ್ನು ಗೊತ್ತುಪಡಿಸಲು ಸೂಪರಿಂಟೆಂಡೆಂಟ್ ಇಂಜಿನಿಯರಿಗೆ ಅಧಿಕಾರ ನೀಡಲಾಗಿದೆ ಎಂದು ಹೇಳಿದ್ದೀರಿ. ಅವರಿಗೆ ಸರ್ಕಾರದವರು ನಿರ್ದೇಶನವನ್ನು ಕೊಡುವಾಗ ಯಾವ ಕ್ರೈಟೀರಿಯ, ಯಾವ ಬೆಸಿಸ್ ಮೇಲೆ ಅವನ್ನು ಫಿಕ್ಸ್ ಮಾಡಬೇಕು ಎಂದು ಆದೇಶವನ್ನು ಕೊಟ್ಟಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಪಿ. ಡಬ್ಲ್ಯೂ. ಡಿ. ಕೋಡಿನಲ್ಲಿ ವಿಧಿತವಾಗಿದೆ